# ಎರಡು ಒಡಂಬಡಿಕೆಗಳು

## ಓವೆನ್ ಡಿ. ಓಲ್‌ಬ್ರಿಟ್ಜ್

*"ಧರ್ಮಶಾಸ್ತ್ರವು ಯಾವದನ್ನೂ ಸಿದ್ಧಿಗೆ ತಾರದೆ ಇರುವದರಿಂದ ಮೊದಲಿದ್ದ ನಿಯಮವು ನಿರ್ಬಲವಾಗಿಯೂ ನಿಷ್ಪ್ರಯೋಜಕವಾಗಿಯೂ ಇದ್ದು ರದ್ದಾಗಿ ಹೋಯಿತು. ಅದಕ್ಕೆ ಬದಲಾಗಿ ಉತ್ತಮವಾಗಿರುವ ಒಂದು ನಿರೀಕ್ಷಾಧಾರವು ಪ್ರಾಬಲ್ಯಕ್ಕೆ ಬಂತು. ಈ ನಿರೀಕ್ಷಾಧಾರವು ನಮ್ಮನ್ನು ದೇವರ ಸನ್ನಿಧಿಗೆ ಸೇರಿಸುವಂಥದು" (ಇಬ್ರಿಯ 7:18, 19).*

ಹಳೇ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳನ್ನು ಹೋಲಿಸಲು ಸಜೀವವಾದ ಉದಾಹರಣೆಯನ್ನು ಉಪಯೋಗಿಸಿ ಪೌಲನು ಅವುಗಳ ಬಗ್ಗೆ ಬರೆದನು:

> ಧರ್ಮಶಾಸ್ತ್ರಾಧೀನರಾಗುವದಕ್ಕೆ ಮನಸ್ಸುಳ್ಳವರೇ, ಧರ್ಮಶಾಸ್ತ್ರಕ್ಕೆ ಕಿವಿಗೊಡುವದಿಲ್ಲವೋ? ನನಗೆ ಹೇಳಿರಿ. ಅದರಲ್ಲಿ ಬರೆದಿರುವದೇನಂದರೆ, ಅಬ್ರಹಾಮನಿಗೆ ಇಬ್ಬರು ಮಕ್ಕಳಿದ್ದರು; ಒಬ್ಬನು ತೊತ್ತಿನಿಂದ ಹುಟ್ಟಿದವನು, ಒಬ್ಬನು ಧರ್ಮಪತ್ನಿಯಿಂದ ಹುಟ್ಟಿದವನು. ತೊತ್ತಿನ ಮಗನು ಸ್ವಾಭಾವಿಕವಾಗಿ ಹುಟ್ಟಿದನು. ಧರ್ಮಪತ್ನಿಯ ಮಗನೋ ವಾಗ್ದಾನದ ಫಲವಾಗಿ ಹುಟ್ಟಿದನು. ಈ ಸಂಗತಿಗಳು ಉಪಮಾನವಾಗಿವೆ; ಹೇಗಂದರೆ, ಆ ಇಬ್ಬರು ಸ್ತ್ರೀಯರು ಎರಡು ಒಡಂಬಡಿಕೆಗಳೇ. ಒಂದು ಒಡಂಬಡಿಕೆ ಸೀನಾಯಿ ಪರ್ವತದಿಂದ ಉತ್ಪನ್ನವಾಗಿ ದಾಸತ್ವದಲ್ಲಿರಬೇಕಾದ ಮಕ್ಕಳನ್ನು ಹೆರುವಂಥದು; ಅದೇ ಹಾಗರ್, ಹಾಗರ್ ಅಂದರೆ ಅರಬಸ್ಥಾನದಲ್ಲಿರುವ ಸೀನಾಯಿ ಪರ್ವತ. ಅವಳು ಈಗಿನ ಯೆರೂಸಲೇಮ್ ಎಂಬವಳಿಗೆ ಸರಿಬೀಳುತ್ತಾಳೆ; ಹೇಗಂದರೆ ಈಕೆ ತನ್ನ ಮಕ್ಕಳ ಸಹಿತ ದಾಸತ್ವದಲ್ಲಿದ್ದಾಳೆ. ಆದರೆ ಮೇಲಣ ಯೆರೂಸಲೇಮ್ ಎಂಬವಳು ಸ್ವತಂತ್ರಳು, ಇವಳೇ ನಮಗೆ ತಾಯಿ (ಗಲಾತ್ಯ 4:21-26).

ಸ್ಪಷ್ಟವಾಗಿ, ಹಾಗರಳಿಂದ ಪ್ರತಿನಿಧೀಕರಿಸಲ್ಪಟ್ಟ ಒಡಂಬಡಿಕೆಯು ಹಳೇ ಒಡಂಬಡಿಕೆಯಾಗಿದೆ. ಕ್ರೈಸ್ತರು ಸ್ವತಂತ್ರ ಮಹಿಳೆಯ, ಸಾರಳ, ಹೊಸ ಒಡಂಬಡಿಕೆಯ ಮಕ್ಕಳಾಗಿದ್ದಾರೆ. ದಾಸಿಯ, ಇಸ್ರಾಯೇಲ್ಯರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯ ಪ್ರತಿನಿಧಿಯಾದಾಕೆಯ ಮಕ್ಕಳಾಗಿರುವದಿಲ್ಲ (ಗಲಾತ್ಯ 4:31). ದಾಸಿಯ ಮಕ್ಕಳು ಸ್ವತಂತ್ರ ಮಹಿಳೆಯ ಮಕ್ಕಳೊಂದಿಗೆ ಬಾಧ್ಯಸ್ಥರಾಗಿರಲಾರರು (ಗಲಾತ್ಯ 4:30). ಮಕ್ಕಳು, ಗುಲಾಮರಲ್ಲ, ಬಾಧ್ಯಸ್ಥರಾಗಿರುವರು (ಗಲಾತ್ಯ 4:7).

ಮೊದಲನೆಯ ಒಡಂಬಡಿಕೆಯು ಇಸ್ರಾಯೇಲಿನ ಮಕ್ಕಳೊಂದಿಗೆ ಇತ್ತು (ವಿಮೋಚನಕಾಂಡ 34:27, 28). ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ವಾರಸುದಾರರು ದೇವರ ಮಕ್ಕಳಾಗಿರುವವರು, ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದವರು (ಗಲಾತ್ಯ 3:26, 27). ಮೊದಲನೆಯ ಒಡಂಬಡಿಕೆಯ ಅಧೀನತೆಯಲ್ಲಿರುವವರು ಸ್ವತಂತ್ರ ಮಹಿಳೆಯ ಮಕ್ಕಳೊಂದಿಗೆ, ಅಂದರೆ, ಕ್ರಿಸ್ತನ ಒಡಂಬಡಿಕೆ ಅಧೀನತೆಯಲ್ಲಿ ಇರುವವರೊಂದಿಗೆ ಬಾಧ್ಯತೆ ಹೊಂದಲಾರರು. ಮೊದಲನೆಯ ಒಡಂಬಡಿಕೆಯ ಗುಲಾಮಗಿರಿಯಿಂದ

ಬಿಡುಗಡೆ ಹೊಂದಿ, ಕ್ರೈಸ್ತರು ದಾಸತ್ವದ ನೊಗದೊಳಗೆ ಪುನಃ ಸಿಕ್ಕಿಕೊಳ್ಳಬಾರದು. ಕ್ರಿಸ್ತನು ನಮ್ಮನ್ನು ಬಿಡುಗಡೆ ಮಾಡಿದ್ದಾನೆ (ಗಲಾತ್ಯ 5:1).

ಅಪೊಸ್ತಲರು ಹೊಸ ಒಡಂಬಡಿಕೆಯ (2 ಕೊರಿಂಥ 3:6), ಕಲ್ಲುಗಳ ಮೇಲೆ ಬರೆಯಲ್ಪಟ್ಟ ದಶಾಜ್ಞೆಗಳಿಗಿಂತ ಹೆಚ್ಚು ಮಹಿಮೆಯುಳ್ಳ ಒಡಂಬಡಿಕೆಯ ಸೇವಕರಾಗಿದ್ದಾರೆ, ಮೊದಲನೆಯ ಒಡಂಬಡಿಕೆಯು ಮರಣದ ಮತ್ತು ಶಿಕ್ಷೆಯ ಸೇವಕನಾಗಿತ್ತು (2 ಕೊರಿಂಥ 3:7-9). ದೇವರ ಮಹಿಮೆಯುಳ್ಳ ಸನ್ನಿಧಿಯಲ್ಲಿ ಆ ಒಡಂಬಡಿಕೆಯನ್ನು ಸ್ವೀಕರಿಸಿದ ನಂತರ, ಅವನ ಮುಖದ ಪ್ರಕಾಶವನ್ನು ಇಸ್ರಾಯೇಲ್ಯರು ನೋಡಲಿಕ್ಕಾಗದಂತೆ ಮೋಶೆಯು ಮುಸುಕನ್ನು ಧರಿಸಬೇಕಾಗಿತ್ತು (2 ಕೊರಿಂಥ 3:7-13; ವಿಮೋಚನಕಾಂಡ 34:27-33).

ಪೌಲನು ಕೊರಿಂಥದಲ್ಲಿದ್ದ ಕ್ರೈಸ್ತರಿಗೆ ಬರೆಯುವ ಸಮಯದಲ್ಲಿ, ಹೊಸ ಒಡಂಬಡಿಕೆಯ ಮಹಿಮೆಯಿಲ್ಲದ ಕಲ್ಲಿನ ಮೇಲೆ ಬರೆಯಲ್ಪಟ್ಟ ಒಡಂಬಡಿಕೆಯು (2 ಕೊರಿಂಥ 3:9, 10) ಉಳಿದುಕೊಂಡಿರಲಿಲ್ಲ. "ಇಲ್ಲದೆ ಹೋಗುವಂಥದ್ದು ಪ್ರಭಾವವುಳ್ಳದ್ದಾಗಿದ್ದರೆ, ಶಾಶ್ವತವಾಗಿ ಇರುವಂಥದು ಬಹು ಹೆಚ್ಚಾಗಿ ಪ್ರಭಾವವುಳ್ಳದ್ದಾಗಿರ ಬೇಕಲ್ಲವೇ" (2 ಕೊರಿಂಥ 3:11). ಅವನು ಸೇವಕನಾಗಿರುವ ಹೊಸ ಒಡಂಬಡಿಕೆಯು ಇನ್ನೂ ಉಳಿದಿರುವದು, ಆದರೆ ಕಲ್ಲುಗಳ ಮೇಲೆ ಬರೆಯಲ್ಪಟ್ಟಿದ್ದು ಆಗಲೇ ಬಾಡಿಹೋಗಿದೆ.

ಇಸ್ರಾಯೇಲ್ಯರಿಗೆ ದೇವರು ಕೊಟ್ಟ ಧರ್ಮಶಾಸ್ತ್ರವು ತನ್ನ ಉದ್ದೇಶವನ್ನು ಸಾಧಿಸಿತು ಮತ್ತು ಯೇಸುಕ್ರಿಸ್ತ ಹೊಸ ಒಡಂಬಡಿಕೆಯ ಬರೋಣದಲ್ಲಿ ತೆಗೆದು ಹಾಕಲ್ಪಟ್ಟಿತು. ಆಗ ಹೊಸ ಒಡಂಬಡಿಕೆಯು ಯೇಸುವಿನ ಮರಣ ಮತ್ತು ರಕ್ತದಿಂದ ಪ್ರತಿಷ್ಠಿಸಲ್ಪಟ್ಟದ್ದರಿಂದ, ಈಗ ನಾವು ಇಸ್ರಾಯೇಲ್ಯರಿಗೆ ದೇವರು ಕೊಟ್ಟ ಒಡಂಬಡಿಕೆಯ ಅಧೀನತೆಯಲ್ಲಿ ಇರುವವರಲ್ಲ. ಧರ್ಮಶಾಸ್ತ್ರ ಮತ್ತು ಒಡಂಬಡಿಕೆ ತಮ್ಮ ಉದ್ದೇಶವನ್ನು ಸಾಧಿಸಿದವು ಮತ್ತು ಅವು ಮುನ್ಸೂಚಿಸಿದ ಯೇಸುವಿನ ಮಹಿಮೆಯುಳ್ಳ ಒಡಂಬಡಿಕೆಯು ತನ್ನೆಲ್ಲಾ ಮಹಿಮೆಯಲ್ಲಿ ಬೆಳಗುವಂತೆ ಅವು ಅಂತ್ಯಗೊಂಡವು.

© 2009 Truth for Today